# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 202 | Pages. 2 | Date: 20-06-2025, FRIDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 202 - ಪುಟಗಳು : 2 - 20 ಜೂನ್ 2025 ಶುಕ್ರವಾರ | Ph: 8762954248 | ದರ : ₹1


# ಈಜುಕೊಳ ಅವ್ಯವಸ್ಥೆ : ಸಾರ್ವಜನಿಕರ ಗೋಳು

## ಪಾಚಿಗಟ್ಟಿದ ನೀರೇ ಗತಿ | ಗಮನ ಹರಿಸದ ಮಹಾನಗರ ಪಾಲಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಮಹಾರಾಜ ಪಾರ್ಕ್‌ನಲ್ಲಿರುವ ಮಹಾನಗರ ಪಾಲಿಕೆ ವ್ಯಾಪ್ತಿಯ ಈಜುಕೊಳ ಪಾಚಿಗಟ್ಟಿ ನೀರು ಕಲುಷಿತಗೊಂಡಿದ್ದು ಈಜುಗಾರರು ಪರದಾಡುವಂತಾಗಿದೆ.

ಹಲವು ತಿಂಗಳಿಂದ ಇದೇ ಪರಿಸ್ಥಿತಿ ಇದೆಯಾದರೂ ಮಹಾನಗರ ಪಾಲಿಕೆ ಜಾಣಮೌನ ವಹಿಸಿದೆ. ಶಾಲಾ ಮಕ್ಕಳು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಈಜಲು ಬರುತ್ತಾರೆ. ನಿಗದಿತ ಶುಲ್ಕ ಕಟ್ಟಿದರೂ ಸಮರ್ಪಕ ವ್ಯವಸ್ಥೆ ಕಲ್ಪಿಸಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈಜುಕೊಳದ ನೀರನ್ನು ನಿತ್ಯವು ಬದಲಾಯಿಸುತ್ತಿರಬೇಕು. ಬೆಳಗಿನ ವೇಳೆ ಮೂರು, ಮಧ್ಯಾಹ್ನ 2 ಹಾಗೂ ಸಂಜೆ ಒಂದು ಬ್ಯಾಚ್‌ನಲ್ಲಿ ಈಜಲು ಅವಕಾಶ ಕಲ್ಪಿಸಲಾಗಿದೆ. ಒಂದು ಬ್ಯಾಚ್‌ಗೆ ಕನಿಷ್ಠ 15 ರಿಂದ 20 ಜನರು ಇರುತ್ತಾರೆ. ದಿನಕ್ಕೆ ಆರು ಬ್ಯಾಚ್‌ನಿಂದ ಅಂದಾಜು 100 ರಿಂದ 120 ಜನರು ಬರುತ್ತಾರೆ.




ಆದರೆ ಪ್ರತಿದಿನ ನೀರು ಬದಲಿಸದೆ ಇರುವುದರಿಂದ ನೊರೆ ಬರುತ್ತಿದ್ದು ನೀರು ಈಜಲು ಯೋಗ್ಯವಾಗಿಲ್ಲ. ಈಜುಕೊಳ ಹಾಗೂ ಸುತ್ತಲಿನ ಪ್ರದೇಶ ಸಂಪೂರ್ಣ ಪಾಚಿಗಟ್ಟಿ ಸ್ವಲ್ಪ ಎಚ್ಚರ ತಪ್ಪಿದರೂ ಬೀಳುವ ಪರಿಸ್ಥಿತಿ ಇದೆ. ಈಗ ಜೋರು ಮಳೆ ಸುರಿಯುತ್ತಿರುವುದರಿಂದ ಸುತ್ತಲು ಗಿಡಗಂಟಿ ಬೆಳೆದು ಈಜುಕೊಳ ಅವ್ಯವಸ್ಥೆಯ ಆಗರವಾಗಿ ಮಾರ್ಪಟ್ಟಿದೆ. ಈ ಸಂಬಂಧ ಅಲ್ಲಿರುವ ಸಿಬ್ಬಂದಿಗೆ ಪ್ರತಿದಿನ ಮನವರಿಕೆ ಮಾಡಿದರೂ ಪ್ರಯೋಜನವಾಗುತ್ತಿಲ್ಲ ಎಂದು ಈಜುಪಟುಗಳು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

### ದೇವಿಗೆರೆಯಲ್ಲೂ ಅದೇ ಸಮಸ್ಯೆ

ಮಹಾರಾಜ ಪಾರ್ಕ್‌ನಲ್ಲಿರುವ ಈಜುಕೊಳ ಮಾತ್ರವಲ್ಲದೆ ನಗರ ಹೃದಯ ಭಾಗದಲ್ಲಿರುವ ದೇವಿಗೆರೆ ಸಹ ಅನೈರ್ಮಲ್ಯ ತಾಣವಾಗಿ ಬದಲಾಗಿದೆ. ಮಳೆಯಿಂದ ಕೆರೆ ಜಲಾವೃತವಾಗಿದೆಯಾದರೂ ಸಂಪೂರ್ಣ ಪಾಚಿಗಟ್ಟಿ ಮೆಟ್ಟಿಲುಗಳ ಮೇಲೆ ನಡೆದಾಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಿತ್ಯ ಬೆಳಿಗ್ಗೆ ಹಾಗೂ ಸಂಜೆ ಸಾರ್ವಜನಿಕರು ದೇವಿಗೆರೆ ಸುತ್ತಲು ತಿರುಗಾಡುವುದು ವಾಡಿಕೆ. ಅದಕ್ಕಾಗಿ ಟೈಲ್ಸ್, ಕಬ್ಬಿಣದ ಸರಳು ಅಳವಡಿಸಲಾಗಿದೆ. ಆದರೆ ಸ್ವಚ್ಛತೆ ಕೊರತೆಯಿಂದ ಅಲ್ಲಿ ಕಾಲಿಡಲು ಆಗದಂತಹ ಪರಿಸ್ಥಿತಿ ಇದೆ. ಜನರು ಹೆಚ್ಚಾಗಿ ಸೇರುವ ಸ್ಥಳಗಳಲ್ಲಿಯಾದರೂ ಮಹಾನಗರ ಪಾಲಿಕೆ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂಬ ಒತ್ತಾಯ ಕೇಳಿಬಂದಿದೆ.

> ಮಹಾರಾಜ ಪಾರ್ಕ್‌ನ ಈಜುಕೊಳ ಸಮಸ್ಯೆ ಗಮನಕ್ಕೆ ಬಂದಿದ್ದು ಆಯುಕ್ತರೊಂದಿಗೆ ಚರ್ಚಿಸಿದ್ದೇನೆ. ಸ್ವಚ್ಛತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
> – ಎಂ. ಚಂದ್ರೇಗೌಡ, ಮೇಯರ್

### 540 ರೂ. ಶುಲ್ಕ ನಿಗದಿ

ಭಾನುವಾರ ಹೊರತುಪಡಿಸಿ ವಾರದ ಆರು ದಿನವೂ ಈಜುಕೊಳ ಸಾರ್ವಜನಿಕರಿಗೆ ಪ್ರವೇಶವಿದೆ. 45 ನಿಮಿಷಗಳ ಈಜಲು ತಿಂಗಳಿಗೆ 540 ರೂ. ಶುಲ್ಕ ನಿಗದಿಪಡಿಸಲಾಗಿದೆ. ಇಷ್ಟು ಹಣ ಕಟ್ಟಿದರೂ ಸ್ವಚ್ಛತೆ ಕಾಪಾಡಿಕೊಂಡಿಲ್ಲ. ಇದಕ್ಕಿಂತ ಜಿಲ್ಲಾ ಕ್ರೀಡಾಂಗಣದಲ್ಲಿರುವ ಈಜುಕೊಳವೇ ಚೆನ್ನಾಗಿದೆ ಎಂದು ವಿದ್ಯಾರ್ಥಿಯೊಬ್ಬ ಹೇಳಿದರು.

ಶಾಲೆಗಳಿಗೆ ಬೇಸಿಗೆ ರಜೆ ಇದ್ದಾಗ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈಜಲು ಬರುತ್ತಿದ್ದರು. ಆಗಲೂ ಕಲುಷಿತ ನೀರಿನಲ್ಲೇ ಈಜಬೇಕಿತ್ತು. ಮಕ್ಕಳಿಗೆ ಮನೋರಂಜನೆ ಉದ್ದೇಶದಿಂದಲೂ ಹೆಚ್ಚಿನ ಪೋಷಕರು ಸೇರಿಸಿದ್ದರು. ಆದರೆ ಈಗ ಈಜುಕೊಳ ರೋಗಗಳ ಆವಾಸ ಸ್ಥಾನವಾಗಿ ಮಾರ್ಪಟ್ಟಿದೆ.

> ಕಳೆದ ಮೂರು ತಿಂಗಳಿಂದ ಪಾಚಿಗಟ್ಟಿನ ನೀರಿನಲ್ಲೇ ಈಜುತ್ತಿದೆ. ಇಲ್ಲಿನ ಸಿಬ್ಬಂದಿಗೆ ಹೇಳಿದರೂ ಪ್ರಯೋಜನವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರು ಪರಿಹಾರ ಕ್ರಮ ಕೈಗೊಳ್ಳಬೇಕು.
> – ವಿದ್ಯಾರ್ಥಿ, ಹಾಸನ

# 62 ಲಕ್ಷ ರೂ. ವೆಚ್ಚದ ನವೀಕೃತ ಕಟ್ಟಡ ಉದ್ಘಾಟನೆ



ಹಾಸನ: ನಗರದ ಬಿ. ಕಾಟೀಹಳ್ಳಿ ಬಳಿ ಇರುವ ಸಾರಿಗೆ ಇಲಾಖೆ ಆವರಣದಲ್ಲಿ 62 ಲಕ್ಷ ರೂ. ವೆಚ್ಚದಲ್ಲಿ ನವೀಕರಣಗೊಂಡ ಕಟ್ಟಡವನ್ನು ಶಾಸಕ ಹೆಚ್.ಪಿ. ಸ್ವರೂಪ್ ಗುರುವಾರ ಉದ್ಘಾಟಿಸಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಇಲಾಖೆಯಲ್ಲಿರುವ ಹೆಚ್ಚಿನ ಕೆಲಸ ನಿರ್ವಹಿಸಲು ಇನ್ನಷ್ಟು ಹೆಚ್ಚಿನ ಕೊಠಡಿಗಳ ಅಗತ್ಯವಿದೆ. ಶೀಘ್ರವಾಗಿ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದರು.

ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಗುರುತಿಸಿ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಲಾಗುವುದು. 62 ಲಕ್ಷ ರೂ. ವೆಚ್ಚದಲ್ಲಿ ಇಲಾಖೆಯ ಅನುಕೂಲಕ್ಕೆ ಒಂದು ಕೊಠಡಿಯನ್ನು ಪುನಶ್ಚೇತನಗೊಳಿಸಿ ಹಸ್ತಾಂತರ ಮಾಡಲಾಗಿದೆ ಎಂದರು.

ಸಾರಿಗೆ ಇಲಾಖೆಯಲ್ಲಿನ ಸಮಸ್ಯೆಗಳ ಕುರಿತು ಸಚಿವ ರಾಮಲಿಂಗಾ ರೆಡ್ಡಿ ಅವರ ಗಮನಕ್ಕೆ ತರಲಾಗಿದೆ. ಅಗತ್ಯಕ್ಕೆ ಅನುಗುಣವಾಗಿ ಅನುದಾನ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಇಲಾಖೆಯಲ್ಲಿ ಇನ್ನಷ್ಟು ಅಭಿವೃದ್ಧಿ ಕೆಲಸಗಳು ನಡೆಯಲಿವೆ ಎಂದು ಭರವಸೆ ನೀಡಿದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಆರ್‌ಟಿಒ ರಾಜಗೋಪಾಲ್, ಜೆಡಿಎಸ್ ಜಿಲ್ಲಾ ವಕ್ತಾರ ರಘು ಹೊಂಗೆರೆ ಇದ್ದರು.

# ಮಣಿ ಆಸ್ಪತ್ರೆಯಲ್ಲಿ ಇನ್ಕ್ಯುಬೇಟರ್ ಅಂಬುಲೆನ್ಸ್ ಸೇವೆ ಸೌಲಭ್ಯ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಮಣಿ ಆಸ್ಪತ್ರೆಯಿಂದ ನವಜಾತ ಶಿಶುಗಳ ಆರೈಕೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ರಿಯಾಯಿತಿ ದರದಲ್ಲಿ ಇನ್ಕ್ಯುಬೇಟರ್ ಮತ್ತು ವೆಂಟಿಲೇಟರ್ ಅಂಬುಲೆನ್ಸ್ ಸೇವೆ ಆರಂಭಿಸಲಾಗಿದೆ ಎಂದು ಆಸ್ಪತ್ರೆ ನಿರ್ದೇಶಕ ಡಾ. ಜಿ.ಕೆ. ಯತೀಶ್ ಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಜಿಲ್ಲೆ ಮತ್ತು ಅಕ್ಕಪಕ್ಕದ ಜಿಲ್ಲೆಯ ಎಲ್ಲಾ ತಾಲ್ಲೂಕು, ಹೋಬಳಿಗಳ ಚಿಕಿತ್ಸಾ ಕೇಂದ್ರ, ಆಸ್ಪತ್ರೆಗಳಲ್ಲಿ ಜನಿಸಿದ ಹೆಚ್ಚುವರಿ ಹಾಗೂ ತೀವ್ರ ನಿಗಾಘಟಕದಲ್ಲಿ ಚಿಕಿತ್ಸೆ ಅಗತ್ಯವಿರುವ ನವಜಾತ ಶಿಶುಗಳನ್ನು ಸಾಗಿಸಲು ಈ ಸೌಲಭ್ಯ ಉಪಯೋಗ ಆಗಲಿದೆ ಎಂದು ವಿವರಿಸಿದರು.

ನವಜಾತ ಶಿಶುಗಳನ್ನು ಹೆರಿಗೆ ಆದ ಸ್ಥಳದಿಂದ ಮತ್ತೊಂದು ಆಸ್ಪತ್ರೆಗೆ ಸಾಗಿಸುವ ಸಮಯ ಬಹಳ ಸೂಕ್ಷ್ಮತೆಯಿಂದ ಕೂಡಿರುತ್ತದೆ. ತಾಯಿಯ ಗರ್ಭದಲ್ಲಿದ್ದ ವಾತಾವರಣವನ್ನು ಮರು ನಿರ್ಮಾಣ ಮಾಡುವುದು ಅಗತ್ಯ ಮತ್ತು ಬಹು ಅವಶ್ಯಕವಾಗಿರುತ್ತದೆ. ಮಗುವಿನ ದೇಹದ ಶಾಖ, ಉಸಿರಾಟ/ಆಮ್ಲಜನಕ ಹೆಚ್ಚಿನ ಪ್ರಮಾಣದಲ್ಲಿ ಅವಶ್ಯವಿರುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ **Baby Incubator** ಹಾಗೂ ಇವುಗಳನ್ನು ನಿಭಾಯಿಸಲು ವಿಶೇಷ ತರಬೇತಿ ಹೊಂದಿದ ವೈದ್ಯರು, ಸಿಬ್ಬಂದಿ ಜಾಗರೂಕತೆಯಿಂದ ಕರೆದುಕೊಂಡು ಹೋಗುತ್ತಾರೆ ಎಂದು ತಿಳಿಸಿದರು.

ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ. ಬಿ.ಕೆ. ಸೌಮ್ಯಮಣಿ, ನವಜಾತ ಶಿಶು ಮತ್ತು ಮಕ್ಕಳ ತಜ್ಞ ಡಾ. ಬಿ. ದಿನೇಶ್ ಇದ್ದರು.

# ಆಟೋ ನಿಲ್ದಾಣ ತೆರವು ವಿರೋಧಿಸಿ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲ್ಲೂಕಿನ ಬಿಕ್ಕೋಡು ಗ್ರಾಮದ ಆಟೋ ನಿಲ್ದಾಣ ತೆರವುಗೊಳಿಸಿ ವಾಣಿಜ್ಯ ಮಳಿಗೆ ಸ್ಥಾಪಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು ಹಾಗು ಆಟೋ ಚಾಲಕರು ಗುರುವಾರ ತಾಲ್ಲೂಕು ಕಚೇರಿ ಎದುರು ಮೌನ ಪ್ರತಿಭಟನೆ ನಡೆಸಿದರು.

ಸರ್ಕಾರಿ ಜಾಗ ಉಳಿಸಿ, ಗೋಮಾಳ ಜಾಗದಲ್ಲಿ ಅಕ್ರಮವಾಗಿ ನಿರ್ಮಾಣ ಮಾಡುತ್ತಿರುವ ವಾಣಿಜ್ಯ ಮಳಿಗೆ ಕಾಮಗಾರಿ ತಡೆಯುವಂತೆ ಉಪ ತಹಶೀಲ್ದಾರ್ ಅಶೋಕ್ ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮಸ್ಥ ಚೇತನ್ ಸಿ.ಗೌಡ ಮಾತನಾಡಿ, ತಾಲ್ಲೂಕಿನ ಬಿಕ್ಕೋಡು ಗ್ರಾಮದ ಸರ್ವೆ ನಂ. 34ರಲ್ಲಿ ಗೋಮಾಳದ 8 ಎಕರೆ 30 ಗುಂಟೆ ಜಾಗವಿದ್ದು, ಆ ಜಾಗದಲ್ಲಿ ಗಣಪತಿ



ದೇವಾಲಯವಿದೆ. ಅದರ ಪಕ್ಕದ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಪಕ್ಕದಲ್ಲಿ 25 ವರ್ಷಗಳಿಂದ ಮಲೆನಾಡು ಆಟೋ ಚಾಲಕರ ಸಂಘದವರು ಜೀವನೋಪಾಯಕ್ಕಾಗಿ ಆಟೋ ನಿಲ್ದಾಣವನ್ನು ದಾನಿಗಳ ಸಹಾಯದಿಂದ ನಿರ್ಮಾಣ ಮಾಡಿಕೊಂಡಿದ್ದಾರೆ ಎಂದರು.

ಕೆಲವರು ಈ ನಿಲ್ದಾಣ ತೆರವುಗೊಳಿಸಿ ವಾಣಿಜ್ಯ ಮಳಿಗೆಗಳನ್ನು ಯಾವುದೇ ಅನುಮತಿ ಪಡೆಯದೆ ನಿರ್ಮಾಣ ಮಾಡುತ್ತಿದ್ದು, ಇಲ್ಲಿದ್ದ ಆಟೋ ನಿಲ್ದಾಣವನ್ನು ರಾತ್ರೋ ರಾತ್ರಿ ತೆರವುಗೊಳಿಸಿದ್ದಾರೆ ಎಂದು ದೂರಿದರು.

ಗ್ರಾ.ಪಂ ಹಾಗೂ ಲೋಕೋಪಯೋಗಿ ಇಲಾಖೆಗೆ ಅತಿಕ್ರಮಣ ಮಾಡಿರುವ ಜಾಗದ ಬಗ್ಗೆ ಸಂಪೂರ್ಣ ದಾಖಲೆ ಸಮೇತ ಗೋಮಾಳದ ಜಾಗವನ್ನು ಕಬಳಿಸಿದ್ದಾರೆಂದು ದೂರು ನೀಡಿದರೂ ಸಹ, ಸಂಬಂಧಪಟ್ಟವರು ಕಣ್ಣು ಮುಚ್ಚಿಕುಳಿತಿದ್ದಾರೆ ಎಂದು ಆರೋಪಿಸಿದರು.

ಈಗಾಗಲೆ ಮಳಿಗೆಗಳ ಕಾಮಗಾರಿ ನಡೆಯುತ್ತಿದ್ದು, ತಕ್ಷಣವೇ ಅದನ್ನು ತಡೆದು ಸಾರ್ವಜನಿಕರ ಸೇವೆಗೆ ಮೀಸಲಿಡುವಂತೆ ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಲಿದ್ದು, ಸರ್ಕಾರಿ ಜಾಗವನ್ನು ಉಳಿಸಲು ಮುಂದಾಗದಿದ್ದರೆ ಬಿಕ್ಕೋಡಿನಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಆಟೋ ಚಾಲಕರ ಸಂಘದ ಅಧ್ಯಕ್ಷ ಬಸವರಾಜು ಮಾತನಾಡಿ, 25 ವರ್ಷಗಳ ಕಾಲ ಇಲ್ಲಿ ನಾವು 50ಕ್ಕೂ ಹೆಚ್ಚು ಆಟೋಗಳನ್ನು ನಿಲ್ದಾಣದಲ್ಲಿ ನಿಲ್ಲಿಸಿಕೊಂಡು ತಮ್ಮ ಜೀವನ ನಡೆಸಿಕೊಂಡು ಬರುತ್ತಿದ್ದೇವೆ. ಇಲ್ಲಿ ಎಲ್ಲಾ ಬಡವರಾಗಿದ್ದು, ಏಕಾಏಕಿ ರಾತ್ರಿ ಸಮಯದಲ್ಲಿ ಈ ನಿಲ್ದಾಣವನ್ನು ತೆರವುಗೊಳಿಸಿದ್ದಾರೆ. ಇದು ಸರ್ಕಾರಿ ಜಾಗವಾಗಿದ್ದು, ಆ ಜಾಗವನ್ನು ಅತಿಕ್ರಮಣವಾಗಿ ಪ್ರವೇಶಿಸಿ ಮಳಿಗೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಂಡು ಈ ಹಿಂದೆ ಇದ್ದ ಆಟೋ ನಿಲ್ದಾಣವನ್ನು ಯಥಾಸ್ಥಿತಿ ಕಾಪಾಡುವಂತೆ ಚಾಲಕರ ಪರವಾಗಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಕಾಂತರಾಜು, ಹೊಯ್ಸಳ ಆಟೋ ಸಂಘದ ಪುಟ್ಟರಾಜು, ಮಂಜೇಗೌಡ, ರವೀಶ್, ಅಭಿಷೇಕ್, ಚನ್ನಯ್ಯ, ಜಗದೀಶ್, ತೇಜು, ಶಿವಣ್ಣ, ಚನ್ನಕೇಶವ, ತಮ್ಮಯ್ಯ, ಧರ್ಮೇಶ್, ಕಿರಣ್, ಸತೀಶ್, ರಾಕೇಶ್, ಧರಣೇಶ್, ಲಕ್ಷ್ಮೀಶ್ ಇತರರಿದ್ದರು.

# ಜಿಲ್ಲಾಧಿಕಾರಿ ಲತಾಕುಮಾರಿ ಅಧಿಕಾರ ಸ್ವೀಕಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನೂತನ ಜಿಲ್ಲಾಧಿಕಾರಿಯಾಗಿ ಕೆ.ಎಸ್. ಲತಾ ಕುಮಾರಿ ಗುರುವಾರ ಅಧಿಕಾರ ಸ್ವೀಕರಿಸಿದರು.

ಮೊದಲಿಗೆ ಹಾಸನಾಂಬ ದೇವಸ್ಥಾನಕ್ಕೆ ಭೇಟಿ ನೀಡಿದ ಅವರು ಹಾಸನಾಂಬ ದೇವಾಲಯಕ್ಕೆ ಹಾಗೂ ಸಿದ್ದೇಶ್ವರ ಸ್ವಾಮಿ ದೇಗುಲಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ನಂತರ ಕಚೇರಿಗೆ ಆಗಮಿಸಿದರು.

ಮಗಳು ಜಿಲ್ಲಾಧಿಕಾರಿ ಆಗುವುದು ತಂದೆ-ತಾಯಿಯ ಕನಸಾಗಿತ್ತು. ಈ ಹಿನ್ನೆಲೆಯಲ್ಲಿ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಲತಾಕುಮಾರಿ ಅವರು ಪಾಲಕರನ್ನು ಕರೆದುಕೊಂಡು ಬಂದಿದ್ದರು.

ತಂದೆ ಸಿದ್ದಪ್ಪ ಅವರು ಮಗಳಿಗೆ



ಸಹಿ ಮಾಡಲು ತಮ್ಮ ಬಳಿಯಿದ್ದ ಪೆನ್ನು ಕೊಟ್ಟದ್ದು ವಿಶೇಷವಾಗಿತ್ತು. ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ ಅಧಿಕಾರ ಹಸ್ತಾಂತರ ಮಾಡಿದರು.

ಈ ವೇಳೆ ಮಾತನಾಡಿದ ಕೆ.ಎಸ್. ಲತಾಕುಮಾರಿ ಅವರು, ಹಾಸನಾಂಬ ದೇವಿಗೆ ನಾಡಿನ ಎಲ್ಲರೂ ನಮಿಸುತ್ತಾರೆ. ಗೂಗಲ್ ಮಾಹಿತಿ ಪಡೆದು ಇಲ್ಲಿಗೆ ಬಂದಿದ್ದೇನೆ. ವರ್ಷಕ್ಕೊಮ್ಮೆ ಗರ್ಭಗುಡಿ ಬಾಗಿಲು ತೆರೆಯುತ್ತದೆ ಎಂಬ ಮಾಹಿತಿ ಇತ್ತಾದರೂ ಕಿಂಡಿಯಿಂದ ದೇವಿ ನೋಡಬಹುದು ಎಂದುಕೊಂಡಿದ್ದೆ.

ಆದರೆ ಇಲ್ಲಿ ಕಠಿಣ ನಿಯಮಗಳಿವೆ. ಅಮ್ಮನ ಆಶೀರ್ವಾದ ಪಡೆದು ಜಿಲ್ಲೆಯಲ್ಲಿ ಒಳ್ಳೆಯ ಕೆಲಸ ಮಾಡಲು ಮೊದಲ ಹೆಜ್ಜೆ ಇಟ್ಟಿದ್ದೇನೆ ಎಂದರು.

ಜಿಲ್ಲಾಧಿಕಾರಿ ಆಗುವುದು ಎಲ್ಲರ ಕನಸು. ಅಂತಹ ಅವಕಾಶ ನನಗೆ ಸಿಕ್ಕಿದೆ. ಇದು ನನ್ನ ಅದೃಷ್ಟ.

ಪ್ರಾಮಾಣಿಕತೆ, ನಿಷ್ಠೆಯಿಂದ, ಹಾಸನಾಂಬೆ ಆಶೀರ್ವಾದದಿಂದ ಸಂವಿಧಾನದ ನಿಯಮದಂತೆ ಕೆಲಸ ಮಾಡುವೆ ಎಂದು ಹೇಳಿದರು.

ನಾನು ಉಪವಿಭಾಗಾಧಿಕಾರಿಯಾಗಿ ಕೆಲಸ ಮಾಡಿದ ಅನುಭವ ಇದೆ. ಹಾಗಾಗಿ ಕಂದಾಯ ಇಲಾಖೆ ನನಗೆ ಹೊಸದಲ್ಲ. ಹಾಸನಾಂಬೆ ದರ್ಶನಕ್ಕೆ ಬರುವ ಭಕ್ತರಿಗೆ ಸುಗಮ ದರ್ಶನ ವ್ಯವಸ್ಥೆ ಸವಾಲಿನ ಕೆಲಸ. ಸಣ್ಣ ಜಾಗದಲ್ಲಿ ಜನ ಸಾಗರವೇ ಸೇರುತ್ತದೆ. ಸರಳ ದರ್ಶನಕ್ಕೆ ವ್ಯವಸ್ಥೆ ಮಾಡುವುದು ಜವಾಬ್ದಾರಿಯಾಗಿದೆ ಎಂದು ಪ್ರತಿಕ್ರಿಯಿಸಿದರು.

# ಬಸವಣ್ಣ, ಅಂಬೇಡ್ಕರ್ ಚಿಂತನೆಯಲ್ಲಿ ವ್ಯತ್ಯಾಸವಿಲ್ಲ

## ಪತ್ರಕರ್ತರ ಭವನದಲ್ಲಿ ಮಹನೀಯರ ಜಯಂತಿ | ಪ್ರಾಂಶುಪಾಲ ಮಂಜಯ್ಯ ಉಪನ್ಯಾಸ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಹಾಗೂ ವಿಶ್ವಗುರು ಬಸವಣ್ಣ ಅವರ ಅನುಭವ ಮಂಟಪದ ಚಿಂತನೆ ಒಂದೇ ಎಂದು ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ (ಗಂಧದ ಕೋಠಿ) ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬಸವಣ್ಣ-ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಬಸವಣ್ಣನ ವಚನಗಳು ಸಂವಿಧಾನದಲ್ಲಿ ಐಪಿಸಿ ಕೋಡ್‌ಗಳಾಗಿವೆ. ಇಬ್ಬರಲ್ಲೂ ಸರ್ವರೂ ಒಂದೇ, ಸರ್ವರ ಕಲ್ಯಾಣ ಆಗಬೇಕು ಎಂಬುದಾಗಿತ್ತು. ಅಂಬೇಡ್ಕರ್ ಅವರು ಎಷ್ಟೇ ಕಷ್ಟ ಅನುಭವಿಸಿದರೂ, ರಾಷ್ಟ್ರಕ್ಕೆ, ವಿಶ್ವಕ್ಕೆ ದೊಡ್ಡ ಕೊಡುಗೆ ನೀಡಿದರು. ಅವರ ಸಂವಿಧಾನ ಈ ನೆಲದ ಕಾನೂನಾಗಿದೆ. ಯಾರೂ ಅರ್ಜಿ ಹಾಕಿ ಒಂದು ಜಾತಿಯಲ್ಲಿ ಹುಟ್ಟಲ್ಲ. ಆದರೆ ಹುಟ್ಟಿದ ಮೇಲೆ ಸಾಧನೆ ಮಾಡೋದು ಮುಖ್ಯ ಎಂದರು.

ದೇಶಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ. ಯಾರದೇ ಆಗಲಿ, ಉಸಿರು ಇದ್ದಾಗ ಹೆಸರು ಇರಲ್ಲ, ಉಸಿರು ಹೋದಾಗ ಹೆಸರು ಉಳಿಯುವಂತ ಕೆಲಸ ಮಾಡುವುದು ಮುಖ್ಯ. ಅಂಬೇಡ್ಕರ್-ಬಸವಣ್ಣ ಅವರು



ಅವರ ಪಾಡಿಗೆ ಅವರು ನೆಮ್ಮದಿಯಿಂದ ಇರಬಹುದಿತ್ತು. ಅಂಬೇಡ್ಕರ್ 29 ಪದವಿ ಪಡೆದಿದ್ದರು. ಅವರೊಬ್ಬರ ಉದ್ಧಾರಕ್ಕಾಗಿ ಅಲ್ಲ, ಜಗತ್ತಿನಲ್ಲೇ ಅವರ ಅಧ್ಯಯನ ಶೀಲತೆ ಸರಿಸಾಟಿ ಇಲ್ಲದ್ದು, ಆಳವಾದ ಜ್ಞಾನ ಸಂಪಾದಿಸುವ ಮೂಲಕ ನೊಂದ, ಶೋಷಿತ ಸಮುದಾಯ, ಮಹಿಳೆಯರು, ಅಸಹಾಯಕರಿಗೆ ದನಿಯಾದರು. ಸಾಂಸ್ಕೃತಿಕವಾಗಿಯೂ ಅವರ ಕೊಡುಗೆ ಅನನ್ಯ ಎಂದು ಬಣ್ಣಿಸಿದರು.

ಅವಮದು ತುಳಿತಕ್ಕೊಳಗಾದ ಸಮುದಾಯಕ್ಕೆ ಶಿಕ್ಷಣ ಮರೀಚಿಕೆಯಾಗಿತ್ತು. ಓದು ಕೆಲವರಿಗೆ ಸೀಮಿತ ಆಗಿತ್ತು. ಮೀಸಲಾತಿ ಜೊತೆಗೆ ಶಿಕ್ಷಣ ತಲುಪುವುದು ಸುಲಭ ಇರಲಿಲ್ಲ. ತಿಳಿದುಕೊಳ್ಳುವವರಿಗೆ ತಿಳಿಸುವವರು ಇರಲಿಲ್ಲ. ಬಸವಣ್ಣ ನಂತರ ಅಂಬೇಡ್ಕರ್ ಇದನ್ನು ಬದಲಾಯಿಸಿದರು ಎಂದರು.

ಕಷ್ಟ ಪಡುವವರೆಲ್ಲ ನನ್ನವರು ಎಂದವರು ಬಸವಣ್ಣ, ಬೇರೆ ಬೇರೆ ಜಾತಿಯ ಶರಣರ ಅನುಭವ ಮಂಟಪಕ್ಕೆ ಸೇರಿಸುವ ಮೂಲಕ ದೊಡ್ಡ ಕ್ರಾಂತಿ ಮಾಡಿದರು ಎಂದು ಸ್ಮರಿಸಿದರು.

ಆರ್‌ಬಿಐ ಚಿಂತನೆ ಮೂಲಕ ದೇಶದ ಆರ್ಥಿಕತೆಗೆ ದಿಕ್ಕು ತೋರಿಸಿದವರು ಅಂಬೇಡ್ಕರ್. ಅವರು ಯಾವುದೇ ಜಾತಿಗೆ ಸೀಮಿತರಲ್ಲ. ಎಲ್ಲರ ಪರ ಕೆಲಸ ಮಾಡಿದ್ದಾರೆ. ಅವರ ಯೋಚನೆ ಜನಸಂಖ್ಯೆಗೆ ಅನುಗುಣವಾಗಿ ಎಲ್ಲರಿಗೂ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮಾನತೆ ಸಿಗಬೇಕು. ಎಲ್ಲ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯ ಸಿಗಬೇಕು ಎಂಬುದಾಗಿತ್ತು ಎಂದು ಹೇಳಿದರು.

ಸಾಂಸ್ಕೃತಿಕ ರಾಯಭಾರಿಯಾಗಿ ಬಸವಣ್ಣ ಸಮಾನತೆಗಾಗಿ ಹೋರಾಡಿದರೆ, ಅಂಬೇಡ್ಕರ್ ಅಸ್ಪೃಶ್ಯತೆ ವಿರುದ್ಧ ಹೋರಾಡಿದರು. ಭಕ್ತಿಯ ಪರಕಾಷ್ಠೆ ವಿಚಾರಕ್ಕೆ ಬಂದರೆ ಬಸವಣ್ಣ ಅವರದು ಮುಂಚೂಣಿ ಹೆಸರು, ದುಂಬಿ ಮುಟ್ಟದ, ಸೂರ್ಯ ಕಿರಣ ತಗುಲದ ಹೂ ಇಟ್ಟು ಶಿವಪೂಜೆ ಮಾಡುತ್ತಿದ್ದರು ಎಂದು ವಿವರಿಸಿದರು.

ಸಂಘದ ಅಧ್ಯಕ್ಷ ಕೆ.ಹೆಚ್. ವೇಣು ಕುಮಾರ್ ಮಾತನಾಡಿ, ಪತ್ರಿಕೋದ್ಯಮಕ್ಕೆ ಯಾವುದೇ ಸೆಕ್ಷನ್ ಇಲ್ಲ, ಆದರೆ ಪತ್ರಕರ್ತರಿಗೆ ಮಾತನಾಡುವ ವಾಕ್ ಸ್ವಾತಂತ್ರ್ಯ ಸಿಕ್ಕಿದ್ದು ಅಂಬೇಡ್ಕರ್ ರಚನೆ ಮಾಡಿರುವ ಸಂವಿಧಾನದಿಂದ. ಅವರಿಂದ ನಾವು ನಿರ್ಭಿಡೆಯಿಂದ ಮಾತನಾಡುವ ದನಿ ಬಂದಿದೆ ಎಂದರು. ಬಸವಣ್ಣ ಅವರು 12ನೇ ಶತಮಾನದಲ್ಲೇ ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿ ಸಮ ಸಮಾಜ ನಿರ್ಮಾಣಕ್ಕಾಗಿ ಅನುಭವ ಮಂಟಪ ಮೂಲಕ ಶ್ರಮಿಸಿದರು ಎಂದರು.

ಸಂಘದ ಮಾಜಿ ಅಧ್ಯಕ್ಷ ಬಿ.ಆರ್. ಉದಯಕುಮಾರ್, ಲೀಲಾವತಿ ಮಾತನಾಡಿದರು. ಕೆಯೂಡಬ್ಲ್ಯೂಜೆ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ಬಿ.ಮದನಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪತ್ರಕರ್ತರಾದ ಬಾಳ್ಳುಗೋಪಾಲ್, ಕೆ.ಪಿ.ಎಸ್. ಪ್ರಮೋದ್, ಪ್ರಧಾನ ಕಾರ್ಯದರ್ಶಿ ಬಿ.ಸಿ. ಶಶಿಧರ್, ಚೌಡುವಳ್ಳಿ ಜಗದೀಶ್, ಉಪಾಧ್ಯಕ್ಷರಾದ ಹೆಚ್.ಟಿ.ಮೋಹನ್, ಕೆ.ಎಂ.ಹರೀಶ್ ಇತರರಿದ್ದರು.

# ಪಿಡಿಒ ಲೋಕಾ ಬಲೆಗೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ತಾಲ್ಲೂಕಿನ ಕೋಡಿಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪುಟ್ಟಸ್ವಾಮಿ ಗುರುವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಅಂಗಡಿ ಪರವಾನಗಿ ನವೀಕರಣಕ್ಕೆ ಮಾಲೀಕನಿಂದ ಲಂಚ ಸ್ವೀಕರಿಸುತ್ತಿದ್ದಾಗ ದಾಳಿ ನಡೆದಿದೆ. ಗ್ರಾಮದ ಸತೀಶ್ ಎಂಬುವರ ದಿನಸಿ ಅಂಗಡಿ ಪರವಾನಗಿ ನವೀಕರಣಕ್ಕೆ ಪುಟ್ಟಸ್ವಾಮಿ 5 ಸಾವಿರ ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು. ಈ ವಿಚಾರವನ್ನು ಲೋಕಾಯುಕ್ತ ಪೊಲೀಸರಿಗೆ ಮೊದಲೇ ತಿಳಿಸಿದ್ದ ಸತೀಶ್ ಗುರುವಾರ ಚನ್ನರಾಯಪಟ್ಟಣದ ನ್ಯಾಯಾಲಯ ಬಳಿ ಇರುವ ವೈಷ್ಣವಿ ಹೋಟೆಲ್‌ಗೆ ಕರೆಸಿಕೊಂಡಿದ್ದರು. ಪುಟ್ಟಸ್ವಾಮಿಗೆ 3 ಸಾವಿರ ರೂ. ಲಂಚ ಕೊಡುತ್ತಿದ್ದಾಗ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

# ಕ್ಯಾನಹಳ್ಳಿ ಗ್ರಾಪಂ ಎನ್‌ಡಿಎ ಮೈತ್ರಿಕೂಟಕ್ಕೆ



ಸಕಲೇಶಪುರ: ತಾಲ್ಲೂಕಿನ ಕ್ಯಾನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಎನ್‌ಡಿಎ ಮೈತ್ರಿಕೂಟದ ಧನುಶ್ರೀ ಹಾಗೂ ಉಪಾಧ್ಯಕ್ಷರಾಗಿ ಮಂಚಹಳ್ಳಿ ಮೋಹನ್ ಆಯ್ಕೆಯಾಗಿದ್ದಾರೆ.

ರಾಧಮ್ಮ ಹಾಗೂ ಉಪಾಧ್ಯಕ್ಷ ಪ್ರತಾಪ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಗುರುವಾರ ಚುನಾವಣೆ ಪ್ರಕ್ರಿಯೆ ನಡೆಯಿತು. ತಹಶೀಲ್ದಾರ್ ಅರವಿಂದ್ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

# ಜಿಲ್ಲೆಯ ಕೆರೆಕಟ್ಟೆಗಳಿಗೆ ತಲುಪದ ಎತ್ತಿನಹೊಳೆ ನೀರು

## ಮಾರಿ ಕಣಿವೆಗೆ ಉದ್ದೇಶಿತ ನೀರು । ಬಿಡಿಸಲಾಗದ ಕಗ್ಗಂಟು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎತ್ತಿನಹೊಳೆ ನೀರು ಜಿಲ್ಲೆಯ ಕೆರೆಕಟ್ಟೆಗಳಿಗೆ ಹರಿಯುತ್ತದೆ ಎಂಬ ದಶಕಗಳ ಕನಸು ಕನಸಾಗಿಯೇ ಉಳಿದಿದ್ದು ಈ ವರ್ಷವು ನೀರು ವಾಣಿವಿಲಾಸ ಸಾಗರದ ಪಾಲಾಗಲಿದೆ.

2024 ಸೆಪ್ಟೆಂಬರ್ 6 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಹಲವು ಸಚಿವರು ಎತ್ತಿನಹೊಳೆ ಯೋಜನೆ ಹಂತ-1ಕ್ಕೆ ಚಾಲನೆ ನೀಡಿ, ಮುಂದಿನ ಮುಂಗಾರಿನಲ್ಲಿ ಬಯಲು ಸೀಮೆಗೆ ನೀರು ಹರಿಸಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ, ಎತ್ತಿನಹೊಳೆ ಯೋಜನೆ ಕಾಲುವೆ ನಿರ್ಮಾಣ ಕಾಮಗಾರಿಗೆ ಅರಣ್ಯ ಇಲಾಖೆ ಅಡ್ಡಿಪಡಿಸಿರುವುದರಿಂದ ಕಳೆದ ವರ್ಷವೂ ಎತ್ತಿನಹೊಳೆ ನೀರು ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರ (ಮಾರಿಕಣಿವೆ ಜಲಾಶಯ)ಕ್ಕೆ ಹರಿಸಲಾಗಿತ್ತು.

ಆ ಸಮಸ್ಯೆ ಇದುವರೆಗೂ ರಾಜ್ಯ ಸರ್ಕಾರಕ್ಕೆ ಬಗೆಹರಿಸಲು ಸಾಧ್ಯವಾಗದೆ ಇರುವುದರಿಂದ ಈ ವರ್ಷವೂ ನೀರು ಮಾರಿಕಣಿವೆ ಸೇರಲಿದೆ.

ಬೇಲೂರು ತಾಲ್ಲೂಕು ವ್ಯಾಪ್ತಿಯ ಐದಳ್ಳಕಾವಲ್ ಬಳಿ ಅರಣ್ಯ ಇಲಾಖೆಗೆ ಸೇರಿದ ಪ್ರದೇಶದಲ್ಲಿ ಕಾಲುವೆ ನಿರ್ಮಾಣ ಮಾಡಲು ಅನುಮತಿ ಸಿಗದೆ ಇರುವುದರಿಂದ ಕಾಮಗಾರಿ ಸ್ಥಗಿತಗೊಂಡಿದೆ. ಹೀಗಾಗಿ ವಿಧಿ ಇಲ್ಲದೆ ಮಳೆಗಾಲದಲ್ಲಿ ಸಂಗ್ರಹವಾಗುವ ನೀರನ್ನು ವಾಣಿವಿಲಾಸ ಸಾಗರಕ್ಕೆ ಹರಿಸಿ ಪೋಲು ಮಾಡಬೇಕಾಗಿದೆ.

ಇದೇ ಕಾರಣಕ್ಕೆ ಈ ವರ್ಷವಾದರೂ ಎತ್ತಿನಹೊಳೆ ಯೋಜನೆ ನೀರು ಬಯಲುಸೀಮೆ ತಲುಪುತ್ತದೆ ಎಂಬ ನಿರೀಕ್ಷೆ ಹುಸಿಯಾಗಿದೆ.



### ನಿಧಾನಗತಿಯ ಕಾಮಗಾರಿ

ಕಳೆದ 11 ವರ್ಷಗಳಿಂದ ಎತ್ತಿನಹೊಳೆ ಯೋಜನೆ ಕುಂಟುತ್ತಲೇ ಸಾಗುತ್ತಿದೆ. ಈಗಾಗಲೇ ವಿತರಣಾ ತೊಟ್ಟಿಗಳಿಂದ ನೀರನ್ನು ಮೇಲೆತ್ತುವ ಮೊದಲನೇ ಹಂತ ಯಶಸ್ವಿಗೊಂಡಿದೆ. ಕಾಲುವೆ ಮೂಲಕ ಉದ್ದೇಶಿತ ಪ್ರದೇಶಗಳಿಗೆ ನೀರುವ ಹರಿಸುವ 2ನೇ ಹಂತದ ಕಾಮಗಾರಿಗೆ ಅರಣ್ಯ ಇಲಾಖೆ ಅಡ್ಡಿಯಿಂದ ನೀರು ಅರಸೀಕೆರೆಗೆ ತಲುಪುವ ಮೊದಲೇ ಪ್ರಸ್ತಾವನೆಯೇ ಇಲ್ಲದ ವಾಣಿ ವಿಲಾಸ ಸಾಗರಕ್ಕೆ ನೀರನ್ನು ಹರಿಸಿ ಪೋಲು ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಕಳೆದ ವರ್ಷ ಮೊದಲ ಹಂತದದಲ್ಲಿ ಟ್ರಯಲ್ ರನ್ ನಡೆಸಿ 5 ಟಿಎಂಸಿಗೂ ಹೆಚ್ಚಿನ ನೀರನ್ನು ಮೇಲೆತ್ತಲಾಗಿತ್ತು. ಈ ನೀರನ್ನು ಬೇಲೂರು ತಾಲ್ಲೂಕಿನ ಹಲವು ಕೆರೆಗಳನ್ನು ತುಂಬಿಸಿ ಉಳಿದ ನೀರನ್ನು ಮಾರಿಕಣಿವೆ ಜಲಾಶಯಕ್ಕೆ ಹರಿಸಲಾಗಿತ್ತು. ಈ ವರ್ಷವೂ ಕಾಲುವೆ ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಕಳೆದ ಬಾರಿಯಂತೆ ಈ ವರ್ಷವು ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕು ಭಾಗದಲ್ಲಿ ಹಾದು ಹೋಗಿರುವ ಎತ್ತಿನಹೊಳೆ ಕಾಲುವೆ ಮೂಲಕ ಕಾಗೆದಹಳ್ಳ ಮೂಲಕ ವೇದಾವತಿ ನದಿಗೆ ನೀರು ಹರಿಸಲಾಗುವುದು. ಆದ್ದರಿಂದ ಈ ಭಾಗದ ರೈತರು ಸಾರ್ವಜನಿಕರು ಎಚ್ಚರ ವಹಿಸಬೇಕು. ಕಾಲುವೆ ಬಳಿ ಜಾನುವಾರುಗಳನ್ನು ಕಟ್ಟದಂತೆ ಮುನ್ನೆಚ್ಚರಿಕೆ ನೀಡಲಾಗಿದೆ.

### ನೀರಿನ ಸಂಗ್ರಹಣಾ ಮಟ್ಟ ಹೆಚ್ಚಳ

ಮುಂಗಾರು ಪೂರ್ವದಿಂದಲೂ ಮಲೆನಾಡು ಭಾಗದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿರುವುದರಿಂದ ನೀರಿನ ಸಂಗ್ರಹಣಾ ಮಟ್ಟ ಹೆಚ್ಚಳವಾಗುತ್ತಿದೆ. ಹೀಗಾಗಿ ಪ್ರತಿದಿನ 250 ರಿಂದ 500 ಕ್ಯೂಸೆಕ್ ನೀರನ್ನು ಕಾಲುವೆ ಮೂಲಕ ಹರಿಸಲಾಗುತ್ತಿದೆ. 32 ಕಿಲೋ ಮೀಟರ್ ವರೆಗೆ ಕಾಲುವೆ ಮೂಲಕ ಹರಿಯುವ ನೀರು, ಮುಂದೆ ಹರಿಯಲು ಸಾಧ್ಯವಾಗದೆ, ನೀರನ್ನು ಹಿಡಿಟ್ಟುಕೊಳ್ಳಲೂ ಆಗದೆ ಅನಿವಾರ್ಯವಾಗಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ಸಮೀಪವಿರುವ ವಾಣಿ ವಿಲಾಸ ಸಾಗರಕ್ಕೆ ಹರಿಸಬೇಕಾದ ದುಸ್ಥಿತಿ ಎದುರಾಗಿದೆ. ಇದಕ್ಕೆಲ್ಲ ಕಾರಣ ಅರಣ್ಯ ಇಲಾಖೆ ಎಂಬುದು ಜನಪ್ರತಿನಿಧಿಗಳು, ಬಯಲುಸೀಮೆ ಭಾಗದ ಜನರ ಅಸಮಾಧಾನಕ್ಕೆ ಕಾರಣವಾಗಿದೆ.

### ಹಲವು ಕೆರೆಗಳಿಗೆ ನೀರು

ಎತ್ತಿನ ಹೊಳೆ ನೀರು ಮಾರಿ ಕಣಿವೆ ತಲುಪುವ ಮೊದಲು ಬೇಲೂರು ವ್ಯಾಪ್ತಿಯ ಹಲವು ಕೆರೆಗಳನ್ನು ತುಂಬಿಕೊಳ್ಳಲಿದೆ. ಹೀಗಾಗಿ ಈ ಭಾಗದ ರೈತರಿಗೆ ಒಂದು ರೀತಿಯಲ್ಲಿ ಅನುಕೂಲವಾಗಿದೆ. ಸಕಲೇಶಪುರ ತಾಲ್ಲೂಕಿನ ಹೆಬ್ಬನಹಳ್ಳಿ ವಿತರಣಾ ತೊಟ್ಟಿಯಿಂದ ಹರಿಯುವ ನೀರು ಬೇಲೂರು ತಾಲ್ಲೂಕಿನ ಹಲವು ಕೆರೆ, ಹಳ್ಳಗಳನ್ನು ದಾಟಿಕೊಂಡು ಹಗರೆ ಸಮೀಪದ ಕಾಗೆನಹಳ್ಳ ತಲುಲಿದೆ. ಅಲ್ಲಿಂದ ಹಳೇಬೀಡಿನ ದ್ವಾರಸಮುದ್ರ ಕೆರೆ ತುಂಬಿಸಿ, ಬಳಿಕ ಬೆಳವಾಡಿ ಕೆರೆಗೆ ನೀರು ಹರಿಸಿ, ಆಹುತಿ ವ್ಯಾಲಿ ಮೂಲಕ ವೇದಾ ವ್ಯಾಲಿಗೆ ಹರಿದಿದೆ. ಅಲ್ಲಿಂದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ವಾಣಿವಿಲಾಸ ಸಾಗರ ತಲುಪುತ್ತದೆ.

# ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಮ್ಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ದಿ. ರೇಣುಕ ಅವರ ಜ್ಞಾಪಕಾರ್ಥ ನೋಟ್ಸ್ ಬುಕ್ ಮತ್ತು ಜಾಮಿಟ್ರಿ ವಿತರಿಸಲಾಯಿತು.

ನಿವೃತ್ತ ಶಿಕ್ಷಕ ಕರಿಗೌಡ ಮಾತನಾಡಿ, ಇದೇ ಶಾಲೆಯ ವಿದ್ಯಾರ್ಥಿಯಾಗಿ ಶಿಕ್ಷಕನಾಗಿ ನಿವೃತ್ತಿ ಹೊಂದಿದ್ದೇನೆ. ವಿದ್ಯೆ ಸಾಧಕನ ಸ್ವತ್ತು ಹಾಗೂ ಯಾರು ಅಪರಿಸಲಾರದ ಸಂಪತ್ತು. ಹಿರಿಯರು ಹೇಳುವ ಹಾಗೆಯುವ ಸಮುದಾಯವೇ ದೇಶದ ಅಮೂಲ್ಯ ಸಂಪತ್ತು. ಆದ್ದರಿಂದ ನೀವು ವಿದ್ಯಾರ್ಥಿ ಜೀವನದಲ್ಲಿ ಒಳ್ಳೆಯ ಶಿಸ್ತು, ಒಳ್ಳೆಯ ಗೆಳೆಯರು, ಒಳ್ಳೆಯ ಓದು ಗಳಿಸಿಕೊಂಡರೆ ಸಮಾಜದಲ್ಲಿ ಉತ್ತಮ ಮನುಷ್ಯರಾಗಬಹುದು. ಮೊಬೈಲ್ ಮೊಬೈಲ್ ಗೀಳು ಹಚ್ಚಿಕೊಂಡರೆ ಭವಿಷ್ಯ ನಾಶವಾಗುತ್ತದೆ. ಆದ್ದರಿಂದ ಗುರುಗಳು ಹೇಳಿದ ಮಾತುಗಳನ್ನು ಕೇಳುತ್ತ ಅವರು ಹೇಳಿದ ಮಾರ್ಗದಲ್ಲಿ ನಡೆದರೆ ನೀವು ಸಹ ಮುಂದೆ ಉತ್ತಮ ಮನುಷ್ಯರಾಗುವುದಲ್ಲಿ ಸಂದೇಹವಿಲ್ಲ ಎಂದು ಹೇಳಿದರು.

ತಮ್ಲಾಪುರ ಗಣೇಶ್ ಮಾತನಾಡಿ, ನಮ್ಮಲ್ಲಿ ಒಳ್ಳೆಯ ಆಚಾರ ವಿಚಾರಗಳು ಬೆಳೆಯಬೇಕೆಂದರೆ ಪ್ರತಿಯೊಬ್ಬ ಮನುಷ್ಯನಿಗೂ ವಿದ್ಯೆಯ ಅವಶ್ಯಕತೆ ಇದೆ. ಸರ್ಕಾರ ಇವತ್ತು ಮಕ್ಕಳು ಓದಲು ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸ ಮಾಡುತ್ತಿದೆ. ಉದಾಹರಣೆಯಾಗಿ ಮಕ್ಕಳಿಗೆ ಬಿಸಿ ಊಟ ಕಾರ್ಯಕ್ರಮ ಬಟ್ಟೆ ವಿತರಣೆ ಶೂ ವಿತರಣೆ ಕಾರ್ಯಕ್ರಮ ಮಾಡುತ್ತಿದೆ ಒಂದು ದೇಶ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ ಅತಿ ಅವಶ್ಯಕ ಆದ್ದರಿಂದ ಮಕ್ಕಳು ಸರಿಯಾದ ರೀತಿಯಲ್ಲಿ ಓದಿ ಒಳ್ಳೆ ಪ್ರಜೆಗಳಾಗಬೇಕೆಂದು ಹೇಳಿದರು.

ಮುಖ್ಯ ಶಿಕ್ಷಕಿ ಭಾಗ್ಯ, ಶಿಕ್ಷಕರಾದ ನಾಗೇಂದ್ರ, ವೆಂಕಟೇಶ್ ಹಾಗೂ ನಾಗರಾಜ್ ಉಪಸ್ಥಿತರಿದ್ದರು.

# ಜೂ. 27ಕ್ಕೆ ಕೆಂಪೇಗೌಡ ಜಯಂತಿ: ಪೂರ್ವಭಾವಿ ಸಭೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಪೂರ್ವ ಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಶಾಸಕ ಎ. ಮಂಜು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜೂನ್ 27 ರಂದು ಶಿಕ್ಷಕರ ಭವನದಲ್ಲಿ ಕಾರ್ಯಕ್ರಮ ಆಯೋಜಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಬೆಳ್ಳಿ ರಥದಲ್ಲಿ ಕೆಂಪೇಗೌಡರ ಭಾವಚಿತ್ರದ ಮೆರವಣಿಗೆ ನಡೆಸಲು ತೀರ್ಮಾನಿಸಲಾಯಿತು.

ನಾಡಪ್ರಭು ಕೆಂಪೇಗೌಡರು ರಾಜಧಾನಿ ಬೆಂಗಳೂರಿಗೆ ಕೊಟ್ಟಿರುವ ಕೊಡುಗೆ ಅಪಾರ. ಇದು ರಾಜ್ಯದ ಹೆಮ್ಮೆಯಾಗಿದೆ. ಒಂದು ಸಮುದಾಯಕ್ಕೆ ಸೀಮಿತವಾಗಿ ಬೆಂಗಳೂರನ್ನು ಕೆಂಪೇಗೌಡರು ನಿರ್ಮಿಸಿಲ್ಲ. ಇಂದು ಕೋಟಿಗೂ ಹೆಚ್ಚು ಮಂದಿ ಬೆಂಗಳೂರಿನಲ್ಲಿ ಜೀವನ ಕಂಡುಕೊಂಡಿದ್ದಾರೆ ಎಂದರೇ ಅದಕ್ಕೆ ಕೆಂಪೇಗೌಡರ ಕೊಡುಗೆ ಕಾರಣವಾಗಿದೆ. ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆ ಅಧಿಕಾರಿಗಳು, ಸಂಘ ಸಂಸ್ಥೆಗಳ ಮುಖಂಡರು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶಾಸಕ ಮಂಜು ಅವರು ಮನವಿ ಮಾಡಿದರು.

ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಗೌರವಿಸಲು ಸಭೆ ತೀರ್ಮಾನಿಸಲಾಯಿತು. ಪಪಂ ಸದಸ್ಯೆ ಹಾಗೂ ಒಕ್ಕಲಿಗ ಮಹಿಳಾ ವೇದಿಕೆ ಅಧ್ಯಕ್ಷೆ ಎಚ್.ಎಸ್. ರಶ್ಮಿ, ತಹಶೀಲ್ದಾರ್ ಕೆ.ಸಿ. ಸೌಮ್ಯ, ಗ್ರೇಡ್-2 ತಹಶೀಲ್ದಾರ್ ಸಿ.ಸ್ವಾಮಿ, ತಾಪಂ ಇಒ ಪ್ರಕಾಶ್, ಬಿಇಒ ಕೆ.ಪಿ. ನಾರಾಯಣ್, ಸಿಡಿಪಿಒ ವೆಂಕಟೇಶ್, ಟಿಪಿಒ ನಿಂಗಯ್ಯ, ಪಿಎಸ್ಐ ಕಾವ್ಯ, ಕಂದಾಯ ಇಲಾಖೆ ಸಿಬ್ಬಂದಿ ಉಜ್ವಲ್ ಕುಮಾರ್ ಹಾಗೂ ಇತರರಿದ್ದರು.

# ಅತಿವೃಷ್ಟಿ ಅವಘಡ ತಡೆಗೆ ಮುಂಜಾಗ್ರತೆ ವಹಿಸಿ

## ಅಧಿಕಾರಿಗಳಿಗೆ ತಹಶೀಲ್ದಾರ್ ಸೂಚನೆ । ನದಿ ಅಚ್ಚುಕಟ್ಟು ಪ್ರದೇಶದಲ್ಲಿ ಗಮನ ಹರಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ತಾಲ್ಲೂಕಿನಲ್ಲಿ ಮಳೆ ಹೆಚ್ಚಾಗಿ ಸುರಿಯುತ್ತಿದ್ದು ಅತಿವೃಷ್ಟಿಯಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ ಸೂಚನೆ ನೀಡಿದರು.

ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಕೃತಿ ವಿಕೋಪ ಮುನ್ನೆಚ್ಚರಿಕೆ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಲಾಖೆಯಿಂದ ಮತ್ತೊಂದು ಇಲಾಖೆಗೆ ಪತ್ರ ಬರೆದು ಅದಕ್ಕೆ ಉತ್ತರ ಕಾಯದೆ ಕೆಲಸ ಕಾರ್ಯಗತವಾಗಿರುವ ಬಗ್ಗೆ ಮನದಟ್ಟು ಮಾಡಿಕೊಂಡರೆ ಘಟನೆಗಳು ಎದುರಾದ ಸಂದರ್ಭದಲ್ಲಿ ಪ್ರಾಣಹಾನಿ ತಡೆಯಬಹುದು ಎಂದು ಒತ್ತಿ ಹೇಳಿದರು.

ಮುಂಜಾಗ್ರತೆಗಾಗಿ ಆರೋಗ್ಯ ಇಲಾಖೆಯಲ್ಲಿ ತುರ್ತು ಪ್ರಥಮ ಚಿಕಿತ್ಸೆ ತಂಡ ಸದಾ ಸಿದ್ಧವಿರಬೇಕು.



ಈಜುಗಾರರ ತಂಡವನ್ನು ಗುರುತಿಸಿಕೊಂಡಿರಬೇಕು. ವಾಟೆಹೊಳೆ ಜಲಾಶಯದಿಂದ ನೀರನ್ನು ಹೊರ ಬಿಡುವ ಮುನ್ನ ಜಲಾಶಯ ಮತ್ತು ಕಾಲುವೆ ಪಾತ್ರದ ಅಕ್ಕಪಕ್ಕದಲ್ಲಿರುವ ಹಳ್ಳಿಗಳಿಗೆ ಧ್ವನಿವರ್ಧಕ ಮೂಲಕ ಸುರಕ್ಷತೆ ಸ್ಥಳಕ್ಕೆ ಜನ-ಜಾನುವಾರುಗಳು ಸ್ಥಳಾಂತರಗೊಳ್ಳಲು ಸಲಹೆ ಮತ್ತು ಸೂಚನೆ ನೀಡಬೇಕು ಎಂದು ಹೇಳಿದರು.

ಕೆರೆಗಳಲ್ಲಿ ಹೆಚ್ಚುವರಿ ನೀರು ತೂಬಿನಲ್ಲಿ ಹರಿಯುವಾಗ ಮೀನುಗಳು ಹೊರ ಹೋಗುತ್ತವೆ ಎಂಬ ಉದ್ದೇಶದಿಂದ ಸ್ಥಳೀಯರು ಜಾಲರಿ ಬಳಸುತ್ತಿರುವುದು ಗಮನಕ್ಕೆ ಬಂದಿದೆ. ಜಾಲರಿಗೆ ಕಸಕಡ್ಡಿ ತುಂಬಿಕೊಂಡು ನೀರು ತೂಬು ಮೂಲಕ ಹೊರ ಹರಿಯದೆ ಅಚ್ಚುಕಟ್ಟು ಪ್ರದೇಶಕ್ಕೆ ಹರಿಯುವುದಲ್ಲದೆ, ಏರಿ ತುಂಡಾಗುವ ಸಾಧ್ಯತೆ ಇರುತ್ತದೆ. ಕೆರೆಗೆ ಜಾಲರಿ ಹಾಕಿದ್ದರೆ ತೆರವುಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಬೇಕು ಎಂದರು.

ಎತ್ತಿನಹೊಳೆ ನೀರು ಕಾಲುವೆಯಲ್ಲಿ ಸರಾಗವಾಗಿ ಹರಿಯಲು ಅಡೆತಡೆಗಳಿದ್ದರೆ ತೆರವುಗೊಳಿಸಬೇಕು. ಆಲೂರು-ಮಗ್ಗೆ ಮತ್ತು ಆಲೂರು-ಬಿಕ್ಕೋಡು ರಸ್ತೆಯಂಚಿನ ಎರಡೂ ಕಡೆ ಬಾಗಿರುವ ಮರಗಳ ಕೊಂಬೆಗಳನ್ನು ಕೂಡಲೆ ತೆರವುಗೊಳಿಸಬೇಕು. ಶಾಲೆ ಮತ್ತು ಅಂಗನವಾಡಿ ಕಟ್ಟಡಗಳ ಸುರಕ್ಷತೆ ಬಗ್ಗೆ ಗಮನ ಹರಿಸಬೇಕು ಎಂದು ತಿಳಿಸಿದರು.

ಬೀದಿ ನಾಯಿಗಳ ಉಪಟಳದಿಂದ ಆಸ್ಪತ್ರೆಗೆ ನಾಯಿ ಕಚ್ಚಿರುವ ಘಟನೆಗಳು ಹೆಚ್ಚಾಗಿ ಬರುತ್ತಿವೆ. ನಾಯಿಗಳ ಉಪಟಳ ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕು. ಜಾನುವಾರುಗಳಿಗೆ ಅನಾರೋಗ್ಯ ಉಂಟಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು. ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಅಂಬುಲೆನ್ಸ್ ನಿಲ್ಲಿಸಲು ಸ್ಥಳಾವಕಾಶವಿಲ್ಲ. ರಸ್ತೆಯಂಚಿನಲ್ಲಿರುವ ಚರಂಡಿ ಮೇಲೆ ಸ್ಲ್ಯಾಬ್ ಅಳವಡಿಸಿ ವಾಹನ ನಿಲ್ಲಲು ಅವಕಾಶ ಕಲ್ಪಿಸಬೇಕು ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮ ಮನವಿ ಮಾಡಿದರು. ಅವಘಡಗಳು ಸಂಭವಿಸಿದಾಗ ಸಾರ್ವಜನಿಕರು ಕಂಟ್ರೋಲ್ ರೂಂ. ನಂ. 08170-218222 ಸದಾ ಸಂಪರ್ಕಿಸಬಹುದು ಎಂದರು.

ಸಭೆಯಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮ, ಪೊಲೀಸ್ ಇನ್ಸ್‌ಪೆಕ್ಟರ್ ಮೋಹನ ರೆಡ್ಡಿ, ಪ.ಪಂ. ಮುಖ್ಯಾಧಿಕಾರಿ ಮಂಜುನಾಥ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರಮೇಶ್ ಕುಮಾರ್, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಕೇಶವ್, ವಾಟೆಹೊಳೆ ಸಹಾಯಕ ಎಂಜಿನಿಯರ್ ಸಂದೀಪ್, ಸಿಡಿಪಿಒ ಎ.ಟಿ. ಮಲ್ಲೇಶ್, ತಾ.ಪಂ. ವ್ಯವಸ್ಥಾಪಕ ರಮೇಶ್ ಹಾಗೂ ಇತರರಿದ್ದರು.

# ಹೇಮಾವತಿ ಡ್ಯಾಂನಿಂದ ನದಿಗೆ ನೀರು




ಹಾಸನ: ಮಲೆನಾಡು ಭಾಗದಲ್ಲಿ ವ್ಯಾಪಕ ಮಳೆ ಹಿನ್ನೆಲೆಯಲ್ಲಿ ಗೊರೂರಿನ ಹೇಮಾವತಿ ಜಲಾಶಯದಿಂದ ಗುರುವಾರ 10 ಸಾವಿರ ಕ್ಯೂಸೆಕ್ ನೀರು ಹೊರಬಿಡಲಾಗಿದೆ.

ಕಳೆದ ಒಂದು ವಾರದಿಂದ ಹಾಸನ ಹಾಗೂ ಚಿಕ್ಕಮಗಳೂರು ಭಾಗದಲ್ಲಿ ವ್ಯಾಪಕ ಮಳೆ ಸುರಿದಿದ್ದರಿಂದ ಜಲಾಶಯಕ್ಕೆ ಒಳಹರಿವು ಹೆಚ್ಚಿತ್ತು. ಪ್ರಸ್ತುತ 15,240 ಒಳ ಹರಿವು ಇದ್ದು 10 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗಿದೆ. ಆರು ಕ್ರಸ್ಟ್ ಗೇಟ್‌ಗಳ ಮೂಲಕ ನೀರು ಬಿಡಲಾಗಿದೆ. 2922 ಅಡಿ ಸಾಮರ್ಥ್ಯದ ಹೇಮಾವತಿ ಜಲಾಶಯದಲ್ಲಿ ಸದ್ಯ 2912.50 ಅಡಿ ನೀರಿದೆ.

# ಇತಿಹಾಸದಲ್ಲಿ ಈ ದಿನ

## ಜೂನ್-20

1756: ನವಾಬ್ ಸಿರಾಜ್ ಉದ್ ದೌಲ್ ಕೋಲ್ಕತ್ತಾದ ಫೋರ್ಟ್ ವಿಲಿಯಂ ಮೇಲೆ ಆಕ್ರಮಣ ಮಾಡಿದನು. ಇದು 'ಬ್ಲ್ಯಾಕ್ ಹೋಲ್ ಟ್ರಾಜೆಡಿ' ಎಂಬ ಭಯಾನಕ ಘಟನೆಯ ಪ್ರವೇಶ ಬಾಗಿಲು ಆಯಿತು.

1975: ಪ್ರಧಾನಿ ಇಂದಿರಾ ಗಾಂಧಿ ಅವರ ಆಯ್ಕೆಗೆ ಸಂಬಂಧಿಸಿ ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್ ಮಧ್ಯಂತರ ತೀರ್ಪು ನೀಡಿತು. ಇದು ತುರ್ತು ಸ್ಥಿತಿಗೆ ಕಾರಣವಾಯಿತು.

2001: ಮಧುಲಿಕಾ ಝೂಟ್‌ಶಿ ಭಾರತದಲ್ಲಿ ಮೊದಲ ಮಹಿಳಾ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ನೇಮಕಗೊಂಡರು.

### ಜನನ

1924: ಅಶೋಕ್ ಮೇಹ್ತಾ, ಪ್ರಭಾವಶಾಲಿ ಸಮಾಜವಾದಿ ರಾಜಕಾರಣಿ ಹಾಗೂ ಯೋಜನಾ ಆಯೋಗದ ಸದಸ್ಯರು.

1944: ಗಿರೀಶ್ ಕಾರ್ನಾಡ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ

### ಮರಣ

1837: 4ನೇ ವಿಲಿಯಂ. ಬ್ರಿಟಿಷ್ ರಾಜ, ಭಾರತದ ರಾಜಕೀಯಕ್ಕೆ ಪಾರುಪತ್ಯ ಹೊಂದಿದ ವ್ಯಕ್ತಿ.

1957: ಮುಂಚಂದಿ ಬಾಬುರಾವ್, ಕನ್ನಡದ ಹಿರಿಯ ಚಿಂತಕ ಹಾಗೂ ಸಾಹಿತ್ಯಪರ ವಕ್ತಾರ.

# ವೈಯಕ್ತಿಕ ಲಾಭಕ್ಕಾಗಿ ಒಕ್ಕೂಟಕ್ಕೆ ಕೆಟ್ಟ ಹೆಸರು ತರಬೇಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಇತ್ತೀಚಿನ ದಿನಗಳಲ್ಲಿ ಕಾರ್ನಾಟಕ ಬೆಳೆಗಾರರ ಸಂಘ ಮತ್ತು ಜಿಲ್ಲಾ ಪ್ಲಾಂಟರ್ಸ್ ಸಂಘ ಸ್ಥಳೀಯ ಬೆಳೆಗಾರರನ್ನು ತಲುಪುವಲ್ಲಿ ವಿಫಲವಾಗಿದೆ. ವೈಯಕ್ತಿಕ ಸ್ಥಾನಮಾನಗಳಿಗಾಗಿ ಕೆಲವರು ವೇದಿಕೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಬೆಳೆಗಾರರ ಸಂಘದ ಮಾಜಿ ಅಧ್ಯಕ್ಷ ಹೆಬ್ಬಸಾಲೆ ಪ್ರಕಾಶ್ ಹೇಳಿದರು.

ಪಟ್ಟಣದ ಹೆಚ್.ಡಿ.ಪಿ.ಎ. ಸಭಾಂಗಣದಲ್ಲಿ ಒಕ್ಕೂಟದ ಅಧ್ಯಕ್ಷ ಶಿವಣ್ಣ, ಹೋಬಳಿ ಅಧ್ಯಕ್ಷ ಪ್ರಸನ್ನ ಅವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಕಸಬಾ ಹೋಬಳಿ ಬೆಳೆಗಾರರ ಏಳನೇ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿ, ಸಂಘದಲ್ಲಿ ಏನೇ ಸಮಸ್ಯೆಗಳಿದ್ದರು ಅದನ್ನು ಹಾದಿ ಬೀದಿಯಲ್ಲಿ ಮಾತನಾಡುವುದನ್ನು ಪದಾಧಿಕಾರಿಗಳು ಬಿಡಬೇಕು. ಇದರಿಂದ ಬೆಳೆಗಾರರಲ್ಲಿ ಸಂಘದ ಬಗ್ಗೆ ಅಪನಂಬಿಕೆ ಮೂಡಲಿದೆ. ಇದರಿಂದ ಸಂಘಟನೆಗೆ ತೊಡಕಾಗುತ್ತದೆ. ಕೆಲವರು ಸ್ವಪ್ರತಿಷ್ಠೆಗಾಗಿ ಸಂಘವನ್ನು ರಾಜಕೀಯಗೊಳಿಸಲು ಮುಂದಾಗಿರುವುದು ಸಮಂಜಸವಲ್ಲ. ಈ ರೀತಿಯ ಬೆಳವಣಿಗೆ ಸಮಾಜದಲ್ಲಿ ಸಂಘಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ಜನರು ನಮಗೆ ಗೌರವ ಕೊಡುವುದಿಲ್ಲ ಎಂದು ಕಿವಿಮಾತು ಹೇಳಿದರು.




ಜಿಲ್ಲಾ ಪ್ಲಾಂಟರ್ಸ್ ಸಂಘದ ಉಪಾಧ್ಯಕ್ಷ ಮಂಜುನಾಥ್ ಶೆಟ್ಟಿ ಮಾತನಾಡಿ, ಜಿಲ್ಲಾ ಸಂಘದ ಬೆಳವಣಿಗೆಗೆ ಕಸಬಾ ಹೋಬಳಿ ಸಂಘದ ಕೊಡುಗೆ ಅಪಾರವಾಗಿದೆ. ಅರೇಹಳ್ಳಿಯಲ್ಲಿ ರೈತ ಉತ್ಪಾದಕ ಸಂಸ್ಥೆ ಅತ್ಯುತ್ತಮವಾಗಿ ಕೆಸ ನಿರ್ವಹಿಸುತ್ತಿದ್ದು ಸರ್ಕಾರದಿಂದ ಸೌಲಭ್ಯ, ಹಣದ ಸಹಾಯ ನೀಡುತ್ತಿದೆ. ಜಮೀನನ್ನು ಮಂಜೂರು ಮಾಡಿಕೊಡುತ್ತದೆ. ಹಾಗಾಗಿ ಕಸಬಾ ಹೋಬಳಿಯಲ್ಲೂ ಇಂತಹ ಒಂದು ರೈತ ಉತ್ಪಾದಕ ಸಂಸ್ಥೆ ಸ್ಥಾಪಿಸುವಂತೆ ಸಲಹೆ ನೀಡಿದರು.

ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಶಿವಣ್ಣ ಮಾತನಾಡಿ, ನಾವು ನಮ್ಮ ಮಕ್ಕಳನ್ನು ಪ್ರೀತಿಸುವಷ್ಟೇ ಕಾಫಿ ಗಿಡಗಳನ್ನು ಪ್ರೀತಿಸುವ ಮೂಲಕ ಕಾಫಿ ಕೃಷಿಯನ್ನು ಮಾಡಬೇಕು ಎಂದು ಹೇಳಿದರು.

ಬೆಳೆಗಾರರಿಗೆ ಸಂಘದ ಅವಶ್ಯಕತೆ ಇಂದು ಬಹಳ ಮುಖ್ಯವಾಗಿದೆ. ಇದನ್ನು ಬೆಳೆಸುವಲ್ಲಿ ಬೆಳೆಗಾರರ ಪಾತ್ರ ಮುಖ್ಯವಾಗಿದೆ. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಸಾರ್ವಜನಿಕ ಹಣವನ್ನು ದುಂದು ವೆಚ್ಚ ಮಾಡದೆ ಪ್ರಾಮಾಣಿಕವಾಗಿ ನಿಭಾಯಿಸಬೇಕು ಎಂದು ತಿಳಿಸಿದರು. ಎಲ್ಲಾ ಬೆಳೆಗಾರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮನೆ, ಮನೆಗೆ ತೆರಳಿ ಸಂಘಟಿಸುವ ಮೂಲಕ ಬೆಳೆಗಾರರ ಸಂಘಕ್ಕೆ ಶಕ್ತಿ ತುಂಬಬೇಕು ಎಂದು ಹೇಳಿದರು.

ಕಾರ್ಯದರ್ಶಿ ಟಿ.ಪಿ. ಸುರೇಂದ್ರ ಮಾತನಾಡಿ, ಪ್ರತಿಯೊಬ್ಬರಿಗು ಸಮಾಜದಲ್ಲಿ ಗುರುತಿಸಿಕೊಳ್ಳುವ ಉಮೇದು ಇರುತ್ತದೆ. ಆದರೆ ಎಲ್ಲರಿಗೂ ಈ ಅವಕಾಶ ಸಿಗುವುದಿಲ್ಲ ಎಂಬುದನ್ನು ನಾವು ಮನಗಾಣಬೇಕು. ಹಾಗಾಗಿ ಸಂಘದ ಹುದ್ದೆಗಳು ಅಧಿಕಾರ ಅನುಭವಿಸುವಂತದ್ದಲ್ಲ ಇದೊಂದು ಸೇವೆ ಮಾಡುವಂತ ಜವಾಬ್ದಾರಿಯುತ ಕೆಲಸ ನಿರ್ವಹಿಸುವ ಸ್ಥಾನಮಾನ ಆದ್ದರಿಂದ ಎಲ್ಲರು ಸಂಘಟಿತರಾಗಿ ಶ್ರಮಿಸುವ ಮೂಲಕ ಸಂಘವನ್ನು ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗಬೇಕು ಎಂದು ತಿಳಿಸಿದರು.

ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಎ.ಎಸ್. ಪರಮೇಶ್ ಮಾತನಾಡಿ, ಮುಂದಿನ ದಿನಗಳಲ್ಲಿ ಕಾಫಿ ಬೆಳೆಯಲ್ಲಿ ಇಳಿಕೆ ಕಂಡುಬರಲಿದೆ ಎಂಬ ವಿಷಯ ಬೇಸರದ ಸಂಗತಿಯಾಗಿದೆ ಎಂದು ಹೇಳಿದ ಅವರು, ಕೆಲವೆಡೆ ಗ್ರಾಹಕರು ರೋಬಾಸ್ಟ ಕಾಫಿಗೆ ಬದಲಾಗಿ ಅರೇಬಿಕಾ ಕಾಫಿಯ ರುಚಿಗೆ ಬದಲಾಗಿರುವುದು ರೋಬಾಸ್ಟ ಕಾಫಿ ಬೀಜಕ್ಕೆ ಬೆಲೆ ಕಡಿಮೆಯಾಗಬಹುದು ಎಂದು ಅಭಿಪ್ರಾಯಪಟ್ಟರು.

ಬೆಕ್ಕನಳ್ಳಿ ನಾಗರಾಜ್ ಮಾತನಾಡಿ, ಕಸಬಾ ಹೋಬಳಿ ಬೆಳೆಗಾರರ ಸಂಘ ಎಲ್ಲಾ ಸಂಘಟನೆಗಳಗಿಂತ ಮೇಲ್ಪಂಕ್ತಿಯಲ್ಲಿ ಕೆಲಸ ಮಾಡುತ್ತಿದೆ. ಉತ್ತಮ ಕೆಲಸ ಮಾಡುವವರನ್ನು ಮಹಾಸಭೆಯ ಅನುಮೋದನೆಯ ಮೂಲಕ ಮತ್ತೆ ಮುಂದುವರೆಸಬಹುದು ಎಂದು ಹೇಳಿದರು.

# ಅಂಬುಲೆನ್ಸ್, ಹೆಚ್ಚುವರಿ ವೈದ್ಯರಿಗಾಗಿ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಹೆತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಶಾಶ್ವತ ಅಂಬುಲೆನ್ಸ್ ಹಾಗೂ ಹೆಚ್ಚುವರಿ ವೈದ್ಯರನ್ನು ನೇಮಿಸುವಂತೆ ಒತ್ತಾಯಿಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಪ್ರತಿಭಟನೆ ನಡೆಯಿತು.

ಕರವೇ ತಾಲ್ಲೂಕು ಅಧ್ಯಕ್ಷ ಗಗನ್ ಹಾಡ್ಲಳ್ಳಿ ಮಾತನಾಡಿ, ಹೆತ್ತೂರು ಹೋಬಳಿಯ ಸುತ್ತಮುತ್ತಲಿನ ಸುಮಾರು 35 ಹಳ್ಳಿಗಳಿಗೆ ಇದೊಂದೇ ಸರ್ಕಾರಿ ಆಸ್ಪತ್ರೆ. ಬಹುತೇಕ ಕೂಲಿ ಕಾರ್ಮಿಕರನ್ನು ಒಳಗೊಂಡಿರುವ ಈ ಹೋಬಳಿಯ ಜನರು ತಮ್ಮ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ಹೆತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸುಮಾರು ಒಂದು ತಿಂಗಳಿಂದ ಅಂಬುಲೆನ್ಸ್ (108) ವಾಹನವನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ. ಇದರಿಂದ ಈ ಭಾಗದ



ಸಾರ್ವಜನಿಕರಿಗೆ ತೊಂದರೆಯಾಗಿದೆ. ಈ ಭಾಗಕ್ಕೆ ಶಾಶ್ವತವಾದ ಆ್ಯಂಬುಲೆನ್ಸ್ ವ್ಯವಸ್ಥೆ ಬೇಕು, ಅದನ್ನು ಮಾಡಿಕೊಡಬೇಕು. ಈ ಸಮಸ್ಯೆ ಬಗ್ಗೆ ಸ್ಥಳಕ್ಕೆ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿಗಳು ಬಂದು ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಭರವಸೆ ಕೊಡುವವರೆಗೂ ಪ್ರತಿಭಟನೆ ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಕರವೇ ಜಿಲ್ಲಾ ಕಾರ್ಯದರ್ಶಿ ರಘು ಪಾಳ್ಯ ಮಾತನಾಡಿ, ಈ ಭಾಗಕ್ಕೆ ಸರಿಯಾದ ಅಂಬುಲೆನ್ಸ್ ವ್ಯವಸ್ಥೆ ಇಲ್ಲದೆ ರೋಗಿಗಳು ಪರದಾಡುವ ಪರಿಸ್ಥಿತಿ ಉಂಟಾಗಿದೆ. ಮಂಗಳವಾರ ಸರಿಯಾದ ಅಂಬುಲೆನ್ಸ್ ವ್ಯವಸ್ಥೆ ಇಲ್ಲದೆ ಒಬ್ಬ ರೋಗಿ ಮೃತಪಟ್ಟಿದ್ದಾರೆ. ಇದರಿಂದ ಈ ಭಾಗದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಭಾಗಕ್ಕೆ ಶಾಶ್ವತವಾದ ಅಂಬುಲೆನ್ಸ್ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಸ್ಥಳಕ್ಕೆ ತಾಲ್ಲೂಕು ಆರೋಗ್ಯ ಅಧಿಕಾರಿ ಮಹೇಶ್ ಅವರು ಆಗಮಿಸಿ ಪ್ರತಿಭಟನಾಕಾರರ ಮನವಿಯನ್ನು ಆಲಿಸುವುದರೊಂದಿಗೆ ಹೆತ್ತೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಶಾಶ್ವತ ಅಂಬುಲೆನ್ಸ್ ಸೌಲಭ್ಯವನ್ನು 24 ಗಂಟೆಗಳ ಕಾಲ ಒದಗಿಸುವ ಸೌಲಭ್ಯವನ್ನು ನಾಲ್ಕರಿಂದ ಐದು ದಿನಗಳ ಒಳಗೆ ಮಾಡಲಾಗುವುದು ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248